ಹುಡುಗರಲ್ಲಿ ಬೈಕ್‌ಗಳ ಶೋಕಿ ಹೆಚ್ಚುತ್ತಿದ್ದಂತೆ ಅಂಗಡಿ ಹಿಂಬಾಗಿಲಿನಿಂದ ಪೆಟ್ರೋಲ್ ಮಾರಿದ. ಮುಂದೊಂದು ದಿನ, ಪೈಮಾಮ್ ಬಾಗಿಲು ಮುಚ್ಚಿದ್ದ ಬಟ್ಟೆ ಅಂಗಡಿಯನ್ನೇ ಖರೀದಿಸಿ ಹೊಸ ಹೊಸ ಫ್ಯಾಷನ್‌ನ ಬಟ್ಟೆ ಸೇಲ್ ಮಾಡಿದ. ಊರ ರೈತರ ಭತ್ತವನ್ನು ಹೋಲ್ ಸೇಲ್ ಆಗಿ ಖರೀದಿ ಮಾಡಿ ದಾವಣಗೆರೆಯ ಅಕ್ಕಿ ಮಿಲ್‌ಗಳಿಗೆ ರವಾನಿಸಿದ. ಹಣಕಾಸು ಕಂಪನಿ ಮುಟ್ಟುಗೋಲು ಹಾಕಿಕೊಂಡಿದ್ದ ಪೈಮಾಮರ ಹಪ್ಪಳದ ಫ್ಯಾಕ್ಟರಿಯ ಸಾಲ ತೀರಿಸಿ ತನ್ನ ಹೆಸರಿಗೆ ಬರೆಸಿಕೊಂಡ. ಹಪ್ಪಳದ ಜತೆಗೆ ನಾನಾ ಬಗೆಯ ಚಿಪ್ಸ್ ತಯಾರಿಸಿ ರಾಜ್ಯದಾದ್ಯಂತ ಸರಬರಾಜು ಮಾಡಿದ. ಪೊಲೀಸರು ಸೀಜ್ ಮಾಡಿಟ್ಟಿದ್ದ ಥಿಯೇಟರ್ ಅನ್ನೂ ಪೈಮಾಮ್ ಆತನಿಗೇ ಮಾರಿಬಿಟ್ಟರು. ಊರಲ್ಲಿ ಎಲ್ಲರನ್ನೂ ಪೀಡಿಸುತ್ತಿದ್ದ ಇಬ್ಬರು ಪುಡಿ ರೌಡಿಗಳಿದ್ದರು. ಅವರನ್ನೇ ಪುಸಲಾಯಿಸಿ ಈ ಥಿಯೇಟರ್ ಗೇಟ್ ಕೀಪರ್‌ಗಳನ್ನಾಗಿ ನೇಮಿಸುವ ಚಾಕಚಕ್ಯತೆ ತೋರಿದ. ಹಗಲಲ್ಲಿ ಪೌರಾಣಿಕ, ಸಾಮಾಜಿಕ ಸಿನಿಮಾ ತೋರಿಸಿ, ರಾತ್ರಿ ಎರಡು ಶೋ ಪೋಲಿ ಸಿನಿಮಾ ಹಾಕಲು ಶುರು ಮಾಡಿದ. ಪಡ್ಡೆ ಹುಡುಗರು ಮಾತ್ರವಲ್ಲ, ಗಾಂಧಿಪುರದ ಮರ್ಯಾದಸ್ಥ ಗಂಡಸರೂ ತಲೆಗೆ ಟವೆಲ್ ಸುತ್ತಿಕೊಂಡು ಥಿಯೇಟರ್‌ನೊಳಗೆ 'ಉಗ್ರಕಾಮಿ'ಗಳಂತೆ ನುಸುಳತೊಡಗಿದರು... ಹೀಗೆ ಮಲಯಾಳಿ ಕಾಸಿನ ಮೇಲೆ ಕಾಸು ಎಣಿಸತೊಡಗಿದ...

ಏಯ್ ಮಲಯಾಳಿ, ಓಯ್ ಮಲಯಾಳಿ ಎನ್ನುತ್ತಿದ್ದ ಊರಜನ ಕಾಲಕ್ರಮೇಣ ಮಲಯಾಳಿ ಅಣ್ಣಾ ಎನ್ನತೊಡಗಿದರು. ಮುಂದೆ ನೋಡನೋಡುತ್ತಿದ್ದಂತೆ ಆತ ಊರವರ ಪಾಲಿಗೆ ಗೌರವಾನ್ವಿತ ಮಲಯಾಳಿ ಸಾಹುಕಾರ್ ಆಗಿ ಹೋದ!

★★★

